**ಇಂದು ದಿಃ 10-01-2022 ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ವಾದಿ ಪರಃ ಶ್ರೀ ಬಿ.ಎಂ.ಎಸ್ ವಕೀಲರಿಂದಃ**

ನಿ.ಡಿ-2 ರ ನಮ್ಮ ತಂದೆಯ ಹಿಸ್ಸೆಗೆ ಬಂದ 4 ನೇ ಆಸ್ತಿ ನಮ್ಮ ತಂದೆಯ ಹೆಸರಿನಲ್ಲಿದೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಯಿಸಿದ್ದೇನೆ. ಆದರೆ ರಿಪ್ಲೇ ನೋಟೀಸ್ ನಲ್ಲಿ ಸದರಿ ಆಸ್ತಿಯನ್ನು ಮಲ್ಲೇಶಪ್ಪ ಎನ್ನುವವರಿಗೆ ಮಾರಾಟ ಮಾಡಿದ್ದೇವೆ ಎಂದು ಹೇಳಿ ಬರಯಿಸಿದ್ದೇನೆ ಎಂದರೆ ಸರಿ. ರಿಪ್ಲೇ ನೋಟೀಸ್ ನಲ್ಲಿ ತಪ್ಪಾಗಿ ನಮೂದಾಗಿರುತ್ತದೆ. ತಕರಾರು ಇಂಗ್ಲೀಷ್‌ನಲ್ಲಿರುವುದರಿಂದ ನನಗೆ ತಪ್ಪಾಗಿರುವುದು ಗಮನಕ್ಕೆ ಬಂದಿರುವುದಿಲ್ಲ. ನಿ.ಡಿ-2 ರ ನಮ್ಮ ತಂದೆಯ ಹಿಸ್ಸೆಗೆ ಬಂದ 4 ನೇ ಆಸ್ತಿ ದಾವೆಯಲ್ಲಿ ಸೇರಿಸಿ ಪಾಲು ಮಾಡಿಕೊಳ್ಳಲು ನನ್ನ ತಕರಾರು ಇರುವುದಿಲ್ಲ. ದಾವಾ ಸಿ ಶೆಡ್ಯೂಲ್ ಸ್ವತ್ತಿನ ಐಟಂ ನಂಬರ್ 1 ಮತ್ತು 2 ರ ಆಸ್ತಿಗಳ ವಿಸ್ತೀರ್ಣ ನಮ್ಮವು ಇರುವುದಿಲ್ಲ. ಆದ್ದರಿಂದ ನಾನು ಸದರಿ ಆಸ್ತಿಗಳು ನಮಗೆ ಸೇರಿದ್ದಲ್ಲವೆಂದು ಹೇಳಿದ್ದೇನೆ. ನಿ.ಡಿ-57 ರಲ್ಲಿ ತೋರಿಸಿದ ಆಸ್ತಿಗಳ ವಿಸ್ತೀರ್ಣ ಮತ್ತು ದಾವಾ ಸಿ ಶೆಡ್ಯೂಲ್ ನ ಐಟಂ ನಂಬರ್ 1 ಮತ್ತು 2 ರ ಆಸ್ತಿಗಳ ವಿಸ್ತೀರ್ಣ ಒಂದೇ ಇರುತ್ತವೆ ಎಂದರೆ ಸರಿ. ಸರ್ವೆ ನಂಬರ್ 18 ರಲ್ಲಿ ನಮ್ಮ ತಂದೆ ಒಟ್ಟು ಕುಟುಂಬದಲ್ಲಿದ್ದಾಗ 1 ಎಕರೆ ಜಮೀನು ಭೂ ಸ್ವಾಧೀನವಾಗಿತ್ತು ಎಂದರೆ ಸರಿ. ಸರ್ವೆ ನಂಬರ್ 18 ನ್ನು ನಮ್ಮ ತಂದೆ ಮತ್ತು ಚಿಕ್ಕಪ್ಪಂದಿರು ಉತ್ತರ ದಕ್ಷಿಣವಾಗಿ ಹಂಚಿಕೆ ಮಾಡಿಕೊಂಡಿದ್ದಾರೆಂದರೆ ಸರಿ. ನಮ್ಮ ಊರಿನಿಂದ ಹೋದರೆ ಮೊದಲು ನಮ್ಮ ತಂದೆಯ ಜಮೀನು ಬರುತ್ತದೆ. ನಂತರ ನಾಗರಾಜಪ್ಪನ ಜಮೀನು, ಪಂಚಪ್ಪನ ಜಮೀನು ಬರುತ್ತದೆ ಎಂದರೆ ಸರಿ. ನಿ.ಡಿ-65 ನಕಾಶೆಯಲ್ಲಿ ಸರ್ವೆ ನಂಬರ್ 18 ರಲ್ಲಿನ ಚಾನಲ್ ಪೂರ್ವ ಪಶ್ಚಿಮವಾಗಿ ಹೋಗಿದೆ ಎಂದರೆ ಸರಿ. ಇನ್ನೊಂದು ಚಾನಲ್ ಸಹ 4 ಜನರ ಜಮೀನುಗಳಲ್ಲಿ ಹಾದುಹೋಗಿದೆ ಎಂದರೆ ಸರಿ. ನನ್ನ ತಂದೆ ಮತ್ತು ಅವರ ಸಹೋದರರ ಎಲ್ಲಾ ಹಿಸ್ಸೆಗಳು ಸಹ ಕಡಿಮೆಯಾಗಬೇಕು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ತಂದೆ ಮತ್ತು ಅವರ ಸಹೋದರರು ವಿಭಾಗದ ನಂತರ ಎಲ್ಲಾ ಜಮೀನುಗಳಲ್ಲಿ ಚಾನಲ್ ಗಳು ಹೋಗಿದ್ದು, ಆದರೆ ಚಾನಲ್ ಗೆ ಹೋದ 4 ಎಕರೆ ಜಮೀನಿನ ವಿಸ್ತೀರ್ಣ ಕಡಿಮೆಯಾಗದೇ ಎಲ್ಲರ ಚಾನಲ್ ಗೆ ಹೋದ ವಿಸ್ತೀರ್ಣ ಸೇರಿಸಿ 2 ಎಕರೆ 26 ಗುಂಟೆಯಂತೆ ನಮೂದು ಮಾಡಿಕೊಂಡಿದ್ದಾರೆ. ನಿ.ಡಿ-65 ಸರ್ಕಾರದವರು ಚಾನಲ್ ಗೆ ಭೂ ಸ್ವಾಧೀನಪಡಿಸಿಕೊಂಡ ನಕ್ಷೆಯಾಗಿರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಕಂಡಿಕೆ 21 ರಲ್ಲಿ ಹೇಳಿರುವುದು ಸರಿ ಇರುತ್ತದೆ. ನಿ.ಡಿ-2 ರ 1 ನೇ ಆಸ್ತಿಯ ಚಕ್ ಬಂದಿ ಸರಿ ಇರುತ್ತದೆ. ಸರ್ವೆ ನಂಬರ್ 18/1 ರಲ್ಲಿ 20 ಗುಂಟಾ ಜಮೀನನ್ನು ವಾದಿಗೆ ಕೋಟ್ಟಿದ್ದೇ ಆದರೆ ಉಳಿದ ಯಾವುದೇ ಚಕ್ ಬಂದಿಯಲ್ಲಿ ನಮ್ಮ ಮತ್ತು ನಮ್ಮ ಕುಟುಂಬದವರ ಜಮೀನು ತೋರಿಸಿಲ್ಲ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೆ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.